ಚಪಾತಿ, ಮಾವಿನಹಣ್ಣಿನ ಸೀಕರಣೆ ಮಾಡಲುದ್ಯುಕ್ತಳಾದಳು, ಹೆಣ್ಣುಮಕ್ಕಳಿಬ್ರೂ ತಾಯಿಗೆ ಕೆಲಸದಲ್ಲಿ ನೆರವಾದರು. ಚಹ ತಯಾರಿಸುವದರಲ್ಲಿ ಅನಸೂಯ ನಿರತಳಾಗಿದ್ದರೂ ಅವಳ ಮನಸ್ಸು, ಬೇರಿನ್ನೇನೋ ಯೋಚಿಸುತ್ತಿತ್ತು. ಇವರೆಲ್ಲ ಹೀಗೆ ಧುತ್ತೆಂದು ಒಟ್ಟಿಗೇ ಬರುವುದರಲ್ಲಿ ಏನೋ ಹಿಕ್ಮತ್ತಿದೆ. ಇಂದು ಈ ಮನೆಯಲ್ಲಿ ಏನೋ ಒಂದು ವಿಕ್ಷಿಪ್ತ ಘಟನೆ ನಡೆಯುವುದಿದೆ ಅಂತ ಅವಳ ಆರನೆಯ ಇಂದ್ರಿಯ ಸೂಚಿಸಿತು. ಎಲ್ಲರಿಗೂ ನಾಷ್ಟಾ ಮುಗಿದ ಮೇಲೆ ಜಗುಲಿಯಲ್ಲಿ ಕಲೆತಾಗ ಹಿರಿಯ ಅಳಿಯ ಜನಾರ್ದನ ಮಾತಿಗಾರಂಭಿಸಿದ.

'ಮಾವಾ, ಹೈವೇ ಸಲುವಾಗಿ ನಿನ್ನ ಅರ್ಧ ತೋಟ ಹಾಗೂ ಮನೆ ಹೋಗ್ತು ಹೇಳಿ ಬೇಜಾರಾದ್ರೂ ಅದಕ್ಕೆ ಪರಿಹಾರಾರ್ಥವಾಗಿ ಕೋಟಿಗಟ್ಟಳೆ ಹಣ ಸಿಗ್ತು ಹೇಳಿ ಖುಶಿಯೂ ಆತು. ಈ ಜಮೀನು – ಮನೆ ಪಿತ್ರಾರ್ಜಿತ ಆಸ್ತಿ. ಇದನ್ನ ಸರಕಾರಕ್ಕೆ ಒಪ್ಪಿಸಿ ಪರಿಹಾರ ತಗಂಬೂಲೆ ನಿನ್ನ ಹೆಣ್ಣಮಕ್ಕಳ ಒಪ್ಪಿಗೆ ಹಾಗೂ ಸಹಿ ಬೇಕೇ ಬೇಕು – ಅಲ್ದಾ?' ಕ್ಷಣಕಾಲ ವಿಚಲಿತನಾದಂತೆ ಕಂಡುಬಂದ ಹಿರಿಯಣ್ಣ ದೇಶಾವರಿ ನಗೆ ಚೆಲ್ಲಿ ಹೇಳಿದ: 'ಒಪ್ಪಿಗೆ– ಸಹಿ ಎಲ್ಲಾ ಬೇಕೇ ಬೇಕು. ಹೌದು ಇದೆಲ್ಲಾ ವಿಷಯ ನಿಂಗೋಕೆ ಹೇಳಿದ್ದು ಯಾರು? ಇನ್ನೆರಡು ದಿವಸ ಬಿಟ್ಟು ನಾನೇ ನಿಂಗೋಕೆ ಫೋನ್ ಮಾಡೋ ಹೇಳಿ ಮಾಡ್ಕಂದಿದ್ದೆ.' 'ಅದೆಲ್ಲಾ ತಿಳಿಸಿದ್ದು ನಾನು' ಎಂದು ಶ್ರೀಕಂಠ ಮುಗುಮ್ಮಾಗಿ ಅಂದ. ಈ ವಿಷಯ ಅವರಿಗೆಲ್ಲಾ ಗೊತ್ತಾಗ್ಲಿ ಹೇಳಿ, ಯಾಕೆಂದ್ರೆ ಹಣ ಪಡಕಂಬೂಲೆ ಅವರದ್ದೂ ಸಹಾಯ, ಸಹಕಾರ ಬೇಕು, ಅಲ್ದನಾ?' ಹಿರಿಯಣ್ಣ ನಗುತ್ತಲೇ ಹೇಳಿದ. 'ಹೌದು, ಬೇಡ ಅಂದೋರ್‍ಯಾರು? ನನ್ನ ಹೆಣ್ಮಕ್ಕಳು ಇದಕ್ಕೆಲ್ಲ ಸಹಿ ಕೊಡದೇ ಹೋಗ್ತ್ವನೋ? ಎಷ್ಟಂದ್ರೂ ಇದು ಅವರ ತವರು ಮನೆ ಅಲ್ದನಾ?'

'ಮಾವಾ, ನಿನ್ನ ಇಬ್ರೂ ಹೆಣ್ಮಕ್ಕಳೂ ಕಂಡಿತಾ ಸಹಿ ಕೊಡ್ತ್ವೋ. ಆದ್ರೆ ಒಂದು ಕಂಡೀಶನ್' ಕಿರಿ ಅಳಿಯ ಪುರುಷೋತ್ತಮ ದನಿಗೂಡಿಸಿದ. 'ಅದೆಂತಾ ಕಂಡೀಶನ್ನೋ ಮಾರಾಯ? ಹೆಣ್ಮಕ್ಕಳಿಗೆ ಅಪ್ಪನ ಮನೇಲೂ ವ್ಯವಹಾರ ಶುರುವಾತೋ ಯಂತದು?' ಹಿರಿಯಣ್ಣ ಕೊಂಚ ಉದ್ವಿಗ್ನಗೊಂಡಿದ್ದ. 'ಈಗಿನ ಕಾಲವೇ ಹಾಗಿದ್ದು ಮಾವಾ' ಪುರುಷೋತ್ತಮ ಮುಂದುವರಿದ: 'ನೋಡು, ನಿಂಗೆ ಸ್ಪಷ್ಟವಾಗಿ ಹೇಳಿಬಿಡ್ತೆ. ನಿನ್ನ ಇಬ್ರೂ ಹೆಣ್ಮಮಕ್ಕಳ ಸಹಿ ನಿಂಗೆ ಬೇಕೋ, ಬರೋ ಹಣದಲ್ಲಿ ನೀನು ಅವರಿಗೆ ತಲಾ ಮೂವತ್ತು ಲಕ್ಷ ರೂಪಾಯಿ ಕೊಡದು. ಇಲ್ಲೆ ಅಂದ್ರೆ ಅವರ ಸಹಿ ಇಲ್ಲೆ. ನಿಂಗೆ ಪರಿಹಾರನೂ ಸಿಗ್ತಿಲ್ಲೆ.' 'ಅಪ್ಪಾ, ನಂದೂ ಒಂದು ಕಂಡೀಶನ್ ಇದ್ದು' ಶ್ರೀಕಂಠ ದನಿಗೂಡಿಸಿದ. 'ಬರೋ ಹಣದಲ್ಲಿ ನಂಗೂ ಮೂವತ್ತು ಲಕ್ಷ ತೆಗೆದಿಡುದೇಯ. ಇಲ್ಲದೇ ಹೋದ್ರೆ ನಾನೂ ಸಹಿ ಕೊಡ್ತಿಲ್ಲೆ.'

ಹಿರಿಯಣ್ಣ ಕನಲಿಹೋದ.

'ಏನ್ರೇ ಹೆಣ್ಣುಮಕ್ಕಳ್ರಾ, ನಿಮ್ಮನ್ನು ಹೊತ್ತು, ಹೆತ್ತು, ಸಾಕಿ ಸಲಹಿದ ಅಪ್ಪಅಮ್ಮಂಗೆ ಚಲೋ ಉಡುಗೊರೆನೇ ಕೊಟ್ರಿ. ಶಾಭಾಸ್. ಹುಟ್ಟಿದ್ರೆ ನಿಮ್ಮಂತಾ ಮಕ್ಕಳು ಹುಟ್ಟವು. ಏನೋ ಶ್ರೀಕಂಠಾ, ಇದೆಲ್ಲಾ ನಿಂದೇ ಕಿತಾಪತಿ, ನಂಗೊತ್ತು. ವರ್ಷ ಮೂವತ್ತಾದ್ರೂ ಮೂರು ಕಾಸು ಸಂಪಾದಿಸೋ ಯೋಗ್ಯತೆಯಿಲ್ಲದಿದ್ರೂ ಇಂತಾ ಮನೆ ಹಾಳು ಕೆಲಸ ಮಾಡೂದಕ್ಕೆ ನಿಂಗೆ ಬೇಕಾದಷ್ಟು ಬುದ್ಧಿವಂತಿಕೆ ಇದ್ದು. ನಾಚಿಕೆ ಆಗೋ ನಿನ್ನ ಜನ್ಮಕ್ಕೆ.'

'ಅಪ್ಪಾ' ಕೆರಳಿ ಕೆಂಡವಾಗಿ ಹೋದ ಶ್ರೀಕಂಠ ಕೈಯೆತ್ತಿಕೊಂಡೇ ಬಂದ 'ಇನ್ನು ಒಂದೇ ಒಂದು ಅಸಕ್ದಾಳ ಮಾತು ನಿನ್ನ ಬಾಯಿಂದ ಹೊರಬಿದ್ರೂ ನೀ ಹುಟ್ಟಿದ್ದಿಲ್ಲೆ ಅನ್ನಿಸಿಬಿಡ್ತೆ, ಹುಶಾರ್' ಅನ್ನುವಷ್ಟರಲ್ಲಿ ಅನಸೂಯ ಕುಳಿತಲ್ಲಿಂದ ಧಡಕ್ಕನೇ ಎದ್ದವಳೇ ಮುಂದೆ ಬಂದು ಮಗನ ಕೆನ್ನೆಗೆ